(ಇಂದು ದಿನಾಂಕ:04-02-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀಸವಾಲು: ಪ್ರತಿವಾದಿಯರ ಪರ ವಕೀಲರಿಂದ:**

1. ನನ್ನ ವಯಸ್ಸು 60 ವರ್ಷ ಇರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ 55 ವರ್ಷ ಅಂತಾ ಬರೆಸಿರುತ್ತೇನೆ. ದಾವಾ ಆಸ್ತಿಗಳು ನನ್ನ ಜಮೀನಿನ ಅಕ್ಕಪಕ್ಕದಲ್ಲಿ ಇಲ್ಲ ಎಂದರೆ ಸರಿ. ವಿಶ್ವೇಶ್ವರರಾವ್ ಜಮೀನು ಖರೀದಿ ಮಾಡಿದ ವೇಳೆಯಲ್ಲಿ ನನ್ನ ವಯಸ್ಸು 20 ವರ್ಷ ಇತ್ತು. ವಿಶ್ವೇಶ್ವರರಾವ್ ಜಮೀನು ಖರೀದಿ ಮಾಡಿದ ವೇಳೆಯಲ್ಲಿ ನನ್ನ ವಯಸ್ಸು 20 ವರ್ಷ ಇತ್ತು ಅಂತಾ ಈ ಪ್ರಕರಣಕ್ಕೆ ಲಾಭ ಆಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. 1981-82 ರಲ್ಲಿ ಯಾರು, ಯಾರ ಬಳಿ, ಎಷ್ಟು ಜಮೀನನ್ನು ಖರೀದಿ ಮಾಡಿರುತ್ತಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ಸರ್ವೇ ನಂಬರ, ಎಕರೆ ಮತ್ತು ಗುಂಟೆ ಗೊತ್ತಿಲ್ಲ. ವಾದಿ ಯಾರ ವಿರುದ್ಧ ಎಷ್ಟು ಆಸ್ತಿಗಳಿಗೆ, ಎಷ್ಟು ದಾವಾ ಆಸ್ತಿಗಳ ಬಗ್ಗೆ ಹಾಕಿರುತ್ತಾರೆ ನನಗೆ ಮಾಹಿತಿ ಇಲ್ಲ. ಬಾಲಯ್ಯನ ಕ್ಯಾಂಪ್‌ನಲ್ಲಿ ವಿಶ್ವೇಶ್ವರರಾವ್ ಹೆಸರಲ್ಲಿ ಗೋಡಾಮ ಇರುತ್ತದೆ ಎಂದರೆ ಸರಿ. ಐಟಮ್ ನಂ.1 ಏಕತ್ರ ಕುಟುಂಬದ ಆಸ್ತಿ ಇದ್ದು, ಐಟಮ್ ನಂ.2 ಮತ್ತು 3 ದುರ್ಗಾಂಬಾ ಕುಮಾರಿರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಐಟಮ್ ನಂ.2 ಮತ್ತು 3 ದುರ್ಗಾಂಬಾ ಮತ್ತು ಕುಮಾರಿರವರ ಸ್ವಯಾರ್ಜಿತ ಆಸ್ತಿ ಇದ್ದು ಅವರೇ ಸಂಪೂರ್ಣ ಮಾಲೀಕರು ಮತ್ತು ಕಬ್ಜಾದಾರರು ಇರುತ್ತಾರೆ ಎಂದರೆ ಸರಿಯಲ್ಲ.

3. ಐಟಮ್ ನಂ.4 ಇದು ಕುಮಾರಿರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಐಟಮ್ 4 ಕುಮಾರಿರವರ ಸ್ವಯಾರ್ಜಿತ ಆಸ್ತಿ ಇದ್ದು ಅವರೇ ಸಂಪೂರ್ಣ ಮಾಲೀಕರು ಮತ್ತು ಕಬ್ಜಾದಾರರು ಇದ್ದರೂ ಕೂಡಾ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪಹಣಿ ನಕಲು ನಾನು ನೋಡಿಲ್ಲ. ಐಟಮ್ ನಂ.2 ರಿಂದ 4 ನೇದ್ದರ ಮೇಲೆ ವಾದಿಗೆ ಯಾವುದೇ ಹಕ್ಕು ಅಧಿಕಾರ ಇಲ್ಲ ಮತ್ತು ಅವು ಏಕತ್ರ ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

4. ವಾದಿ, ದುರ್ಗಾಂಬಾ ಮತ್ತು ಕುಮಾರಿರವರು ಕಳೆದ 30-35 ವರ್ಷಗಳಿಂದ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ, ಮೊದಲು ಜಂಟಿಯಾಗಿದ್ದರು ನಂತರ ಬೇರೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ದಾವಾ ಆಸ್ತಿಗಳನ್ನು ಐಟಮ್ ನಂ.2 ರಿಂದ 4 ದುರ್ಗಾಂಬಾ ಮತ್ತು ಕುಮಾರಿರವರೆ ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ.

5. ಸಾಲ ಯಾರಿಗೆ ಕೊಟ್ಟಿದ್ದಾರೆ , ಯಾರು ಕಟ್ಟಿದ್ದಾರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳ ಮೇಲೆ ಸಾಲ ಮಾಡಿದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಮತ್ತು ನಾನು ಒಳ್ಳೆಯ ಸ್ನೇಹಿತರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಬಗ್ಗೆ ನನಗೆ ಗೊತ್ತು ಇರದೇ ಇದ್ದರೂ ಕೂಡಾ ನಾನು ಗೊತ್ತಿದೆ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು, ಸಿಂಧನೂರು